ಜೆಎಸ್‌ಎಸ್ ಮಹಾವಿದ್ಯಾಪೀಠ

ಜಗದ್ಗುರು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು

# ಜ್ಞಾನವಾರಿಧಿ–41

## ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮ

**13 ಸೆಪ್ಟೆಂಬರ್ 2021 * ಸೋಮವಾರ * ಸಂಜೆ 6.00**

### ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ

ಸುತ್ತೂರು ಶ್ರೀಕ್ಷೇತ್ರ

### ಉಪನ್ಯಾಸ



**ಡಾ. ದೇವಕಿ ಮಾಧವ್**

ಮನಶ್ಶಾಸ್ತ್ರಜ್ಞರು ಮತ್ತು

ವೈಜ್ಞಾನಿಕ ಪ್ರಾಣಾಯಾಮ ವೈದ್ಯರು

**ವಿಷಯ: ವೈಜ್ಞಾನಿಕ ಪ್ರಾಣಾಯಾಮ**

(ಉಪನ್ಯಾಸದ ನಂತರ ಆನ್‌ಲೈನ್‌ನಲ್ಲಿ ಬರುವ ಪ್ರಶ್ನೆಗಳಲ್ಲಿ ಆಯ್ದವುಗಳಿಗೆ ಉತ್ತರಿಸಲಾಗುವುದು)

**ಆನ್‌ಲೈನ್ ಮೂಲಕ ನೇರವಾಗಿ ವೀಕ್ಷಿಸಲು ಹಾರ್ದಿಕ ಸ್ವಾಗತ**

LIVE STREAMING

YouTube http://Youtube.com/c/JSSMahavidyapeethaonline

https://www.facebook.com/JSSMVP

**ಜ್ಞಾನವಾರಿಧಿ** ವಿಶೇಷ ಉಪನ್ಯಾಸಮಾಲೆ ಕಾರ್ಯಕ್ರಮವನ್ನು 2020ರ ಡಿಸೆಂಬರ್ ತಿಂಗಳಿನಿಂದ ಪ್ರತಿ ಸೋಮವಾರ ಏರ್ಪಡಿಸಿಕೊಂಡು ಬರಲಾಗುತ್ತಿದೆ. ಧರ್ಮ, ಅಧ್ಯಾತ್ಮ, ಯೋಗ, ಕಲೆ, ಸಾಹಿತ್ಯ, ಸಂಸ್ಕೃತಿ, ಆರೋಗ್ಯ, ಜೀವನಶೈಲಿ, ವಿಜ್ಞಾನ, ತಂತ್ರಜ್ಞಾನ ಮುಂತಾದ ವಿಷಯಗಳು ಮತ್ತು ಪ್ರಚಲಿತ ವಿದ್ಯಮಾನಗಳನ್ನು ಕುರಿತು ದೇಶ ಮತ್ತು ವಿದೇಶದ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ.

**ಡಾ. ದೇವಕಿ ಮಾಧವ್‌ರವರು** ಖ್ಯಾತ ಮನೋವಿಜ್ಞಾನಿಗಳು, ವೈಜ್ಞಾನಿಕ ಪ್ರಾಣಾಯಾಮ ಸಾಧಕರು ಮತ್ತು ಮಾರ್ಗದರ್ಶಕರು. ಮೈಸೂರು ವಿಶ್ವವಿದ್ಯಾನಿಲಯದ ಬಿಎಸ್‌ಸಿ ಮತ್ತು ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಎಂಎ (ಮನೋವಿಜ್ಞಾನ) ಪದವೀಧರರು. ಕ್ರೀಡಾಕ್ಷೇತ್ರದಲ್ಲಿಯೂ ಪ್ರಾವೀಣ್ಯ ಸಾಧಿಸಿದ್ದಾರೆ. 1976 ರಿಂದ 1985 ರವರೆಗೆ ರಾಷ್ಟ್ರೀಯ ಟೇಬಲ್ ಟೆನ್ನಿಸ್ ಆಟಗಾರರಾಗಿದ್ದರು. ಗೀತಾ ಶಿಶು ಶಿಕ್ಷಣ ಸಂಸ್ಥೆಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ಎರಡು ವರ್ಷ ಮನೋವಿಜ್ಞಾನದ ಅತಿಥಿ ಉಪನ್ಯಾಸಕರಾಗಿದ್ದರು. ಸರ್ಕಾರದ ಶಿಶು ಕಲ್ಯಾಣ ಸಮಿತಿಯಲ್ಲಿ ಜ್ಯೂರಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಮೈಸೂರಿನ ಗುರು ಸುದೇಶ್‌ರವರ ಬಳಿ ಪ್ರಾಣಾಯಾಮವನ್ನು ಕಲಿತರು; ಬಳಿಕ ಬಾಬಾ ರಾಮ್‌ದೇವ್‌ರವರು ಹರಿದ್ವಾರದಲ್ಲಿ ಶಿಕ್ಷಕರಿಗಾಗಿ ಏರ್ಪಡಿಸಿದ್ದ 250 ಗಂಟೆಗಳ ಯೋಗ ಪ್ರಾಣಾಯಾಮ ಶಿಬಿರದಲ್ಲಿ ಭಾಗವಹಿಸಿದ್ದರು. ಇದುವರೆಗೆ 280 ವೈಜ್ಞಾನಿಕ ಪ್ರಾಣಾಯಾಮ ಶಿಬಿರಗಳನ್ನು ನಡೆಸಿದ್ದಾರೆ. ಪ್ರಾಣಾಯಾಮಕ್ಕೆ ಸಂಬಂಧಿಸಿದ ಹಲವಾರು ವೈಜ್ಞಾನಿಕ ಲೇಖನಗಳನ್ನು ಬರೆದಿದ್ದಾರೆ. ಯೋಗಾಚಾರ್ಯ, ಯೋಗಸಾಮ್ರಾಟ್, ಅದ್ಭುತ ಮಹಿಳೆ ಮುಂತಾದ ಹತ್ತಕ್ಕೂ ಹೆಚ್ಚು ಪ್ರಶಸ್ತಿಗಳು ಲಭಿಸಿವೆ. ಯೂ-ಟ್ಯೂಬ್‌ನಲ್ಲಿ ಇವರ ಪ್ರಾತ್ಯಕ್ಷಿಕೆಗಳನ್ನು ವೀಕ್ಷಿಸಬಹುದಾಗಿದೆ. ಹಲವಾರು ವೆಬಿನಾರ್‌ಗಳಲ್ಲೂ ಭಾಗವಹಿಸಿ ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ಕ್ರಿಯಾಶೀಲರಾಗಿದ್ದಾರೆ.

**ಜ್ಞಾನವಾರಿಧಿ-42 * 20 ಸೆಪ್ಟೆಂಬರ್ 2021**

**ಶ್ರೀಮತಿ ಶೋಭಾ ಪಾಟೀಲ್**

ಹಿರಿಯ ವಕೀಲರು ಹಾಗೂ ಮಧ್ಯಸ್ಥಿಕೆದಾರರು
ಬೆಂಗಳೂರು ಮಧ್ಯಸ್ಥಿಕೆ ಕೇಂದ್ರ

**ವಿಷಯ**

ಮಧ್ಯಸ್ಥಿಕೆಯ ಮೂಲಕ ವ್ಯಾಜ್ಯ ಪರಿಹಾರ

**ಜ್ಞಾನವಾರಿಧಿ-43 * 27 ಸೆಪ್ಟೆಂಬರ್ 2021**

**ಶ್ರೀ ಕೃಪಾಕರ ಮತ್ತು ಶ್ರೀ ಸೇನಾನಿ**

ವನ್ಯಜೀವಿ ತಜ್ಞರು ಹಾಗೂ
ಗ್ರೀನ್ ಆಸ್ಕರ್ ಪುರಸ್ಕೃತರು, ಮೈಸೂರು

**ವಿಷಯ**

ಕಾಡಿನ ಸಂರಕ್ಷಣೆ-ಸಂವಾದ